ಬೇಕಾದ ವಿಚಾರ. ಈ ಬಗ್ಗೆ ಸಂಬಂಧಪಟ್ಟ ಮಂತ್ರಿಗಳು ಆಜ್ಞೆ ಮಾಡಬೇಕೆಂದು ಈ ಮೂಲಕ ಕೇಳಿ ಕೊಳ್ಳುತ್ತೇನೆ.

ಶ್ರೀ ಐ.ಪಿ.ಡಿ. ಸಾಲಪ್ಪ.—ಅಧ್ಯಕ್ಷರೆ, ನಾನು ಈ ಬಗ್ಗೆ ಬೆಂಗಳೂರಿಗೆ ಸಂಬಂಧಪಟ್ಟ ಹಾಗೆ ಪ್ರಶ್ನೆಯನ್ನು ಕೇಳಬೇಕೆಂದಿದ್ದೇನೆ. ಬಡವರು ಮನೆಗಳನ್ನು ರಿಪೇರಿ ಮಾಡಿಕೊಳ್ಳುವುದಕ್ಕೆ ಜೆ ರಿಂದ ೧೦ ಮೂಟೆಯವರಿಗೆ ಅವರಿಗೆ ಸಿಮೆಂಟನ್ನು ಒದಗಿಸಿಕೊಡಲಾಗುತ್ತಿತ್ತು. ಈಗ ಆ ರೀತಿ ಒದಗಿಸಿಕೊಡುವುದು ಪೂರ್ತಿ ನಿಂತಿದೆ. ಹಾಗೂ ಈಗ ಕಾಳಸಂತೆಯಲ್ಲಿ ಸಂಮಾರು ೭೦ ರಿಂದ ೮೦ ರೂಪಾಯಿಗಳಿಗೆ ಒಂದು ಒಂದು ಮೂಟೆಯಂತೆ ಸಿಮೆಂಟ್ ಮಾರಾಟವಾಗುತ್ತಿದೆ. ಈ ಸಿಮೆಂಟ್ ತಯಾರಿಕೆಯಲ್ಲಿ ಕಡಪಾ ಕಲ್ಲಂ ಬೆರಕೆ ಮಾಡಿರುತ್ತಾರೆ. ಈ ರೀತಿಯ ಕಲಬೆರಕೆ ಸಿಮೆಂಟ್‌ನಿಂದ ಕಟ್ಟಿದ ಮನೆಗಳ ಗತಿ ಏನು ? ಕಳ್ಳಬಟ್ಟಿಯನ್ನು ಕುಡಿದು ಹೇಗೆ ಜನ ಸತ್ತರೋ ಅದೇ ರೀತಿ ಈ ಕಲಬೆರಕೆ ಸಿಮೆಂಟ್‌ನಿಂದ ಕಟ್ಟಿದ ಮನೆಗಳು ಹೆಚ್ಚು ಬಾಳಿಕೆ ಬರದೇ ಯಾರ ಮೇಲಾದರೂ ಬಿದ್ದು ಆಪಾಯ ತೆಗೆದುಕೊಳ್ಳುವುದರಲ್ಲಿ ಸಂದೇಹವೇ ಇಲ್ಲ. ಕಳೆದ ೨-೩ ತಿಂಗಳ ಹಿಂದೆ ಜಕ್ಕರಾಯನ ಕೆರೆಯ ಅಂಗಳದಲ್ಲಿ ಪೌರಕಾರ್ಮಿಕರಿಗೆ ಕಟ್ಟಲಾಗುತ್ತಿದ್ದ ಕಟ್ಟಡದ ಒಂದು ಭಾಗ ಬಿದ್ದು ಹೋಗಿದ್ದನ್ನು ನಾವು ಕಂಡಿದ್ದೇವೆ. ಇದಕ್ಕೆ ಕಾರಣ ಸಿಮೆಂಟನ್ನು ಕಡಿಮೆ ಪ್ರಮಾಣದಲ್ಲಿ ಬೆರೆಸಿರಬಹುದಂ ಅಥವಾ ಕಲಬೆರಕೆ ಸಿಮೆಂಟ್‌ನಿಂದ ಕಟ್ಟಡವನ್ನು ಕಟ್ಟಿರಬಹುದು. ಆದ್ದರಿಂದ ಈ ಕಾಳಸಂತೆಯಲ್ಲಿ ಸಿಗತಕ್ಕ ಸಿಗತಕ್ಕ ಸಿಮೆಂಟನ್ನು ತಡೆಹಿಡಿದು ಆ ಸಿಮೆಂಟನ್ನು ಕಂಟ್ರೋಲ್ ಮಾಡಿ ಆ ಸಿಮೆಂಟನ್ನು ಈ ಬಡವರಿಗೆ ಹಂಚಿಕೆ ಮಾಡಿದರೆ ಅನುಕೂಲವಾಗುತ್ತವೆಂದು ಹೇಳುತ್ತೇನೆ. ಹಾಗೂ ಆದರಲ್ಲಿನ ಕಲಬೆರಕೆಯನ್ನು ತಪ್ಪಿಸಬೇಕು. ಈ ಬಗ್ಗೆ ಸರ್ಕಾರ ಕಾರ್ಯಕ್ರಮ ಹಾಕಿಕೊಳ್ಳುತ್ತದೆಯೇ ಎಂದು ಕೇಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೇ ಬಳಕೆದಾರರಿಗೆ ಐದಾರು ಗೋಣಿಚೀಲ ಸಿಮೆಂಟ ಕೊಡುವುದನ್ನು ನಿಲ್ಲಿಸಿಲ್ಲ, ಈಗಲೂ ಕೊಡುತ್ತಿದ್ದೇವೆ. ಇನ್ನು ಕಾರ್ಪೊರೇಷನ್ ಕಟ್ಟಡದ ಸಂಬಂಧಪಟ್ಟ ವಿಚಾರವಾಗಿ ಮಾನ್ಯ ಪಸತಿ ಮತ್ತು ನಗರಾಭಿವೃದ್ಧಿ ಸಚಿವರು ಉತ್ತರ ಕೊಡುತ್ತಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಕೇಳುತ್ತಿರುವುದು ಬ್ಲಾಕ್‌ನಲ್ಲಿ ಒಂದು ಮೂಟೆ ಸಿಮೆಂಟಿಗೆ ೭೦ ರೂ.ಗಳನ್ನು ಕೊಟ್ಟು ತಂದರೂ ಅದರಲ್ಲಿ ಕಲಬೆರಕೆ ಇರಂವ ಬಗ್ಗೆ ಕೇಳುತ್ತಿದ್ದಾರೆ.

SRI M. VEERAPPA MOILY.—Of course, we will look into the adulteration of cement.

ಶ್ರೀ ಐ.ಪಿ.ಡಿ. ಸಾಲಪ್ಪ.—ಬ್ಲಾಕ್ ಮಾರ್ಕೆಟ್‌ನಲ್ಲಿ ಮಾರುವುದನ್ನು ತಡೆದು ಕಂಟ್ರೋಲ್ ಏತಕ್ಕೆ ಮಾಡಬಾರದು ?. ಬ್ಲಾಕ್‌ನಲ್ಲಿ ಮಾರುವವರ ಕೈಯನ್ನು ತಪ್ಪಿಸುವುದಕ್ಕಾಗುವುದಿಲ್ಲವೆ ?

ಶ್ರೀ ಎಂ. ವೀರಪ್ಪಮೊಯಿಲಿ.—ಬ್ಲಾಕ್ ಮಾರ್ಕೆಟ್‌ನ್ನು ನಿಲ್ಲಿಸುವುದೇ ಸರ್ಕಾರದ ಇಚ್ಛೆ. ಆ ರೀತಿ ಮಾಡಬೇಕಾದರೆ ಕಾನೂನನ್ನು ಬಲಪಡಿಸಬೇಕು. ಈ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುತ್ತದೆ. Government is ready to see that stricter laws are enforced. ಇಂತಹ ಘಟನೆಗಳು ನಡೆದಿದ್ದರೆ ದಯಮಾಡಿ ಸರ್ಕಾರದ ಗಮನಕ್ಕೆ ತಂದರೆ ತನಿಖೆ ಮಾಡಿ ಸೂಕ್ತ ಕ್ರಮ ತೆಗೆದು ಕೊಳ್ಳಲಾಗುತ್ತದೆ.

MATTER UNDER RULE 312.

Termination of Services of Primary School Teachers belonging to SC/ST in Mandya District.

SMT. NAGAMMA KESHAVA MURTHY (Minister for Primary and Secondary Education):—

There were more than 400 vacancies of Primary School Teachers in Mandya District during 1980. As there was shortage of teaching staff and in order to meet the immediate demands of teachers in

Primary Schools, instructions were issued to appoint local candidates through Employment Exchange, on temporary basis, for a period of nine months or till the regular recruitment is made, to the posts of Primary School Teachers. Accordingly, the Deputy Director of Public Instruction, Mandya selected and appointed 210 local candidates during August 1980. The details of the candidates so appointed are as follows :-

Scheduled Castes	...	182
Scheduled Tribe	...	14
Physically handicapped	...	4
Others	...	10

This temporary arrangement had been made in the interest of the school going children pending recruitment of regular candidates.

Meanwhile, Government issued Special Recruitment Rules, 1981, with a view to fill up all the vacancies in the State. In pursuance of these, rules applications for appointment to the posts of Primary School Teachers were called for. In Mandya District 385 candidates were recruited under the Special Rules 1981 and in order to give place to these regularly recruited candidates the services of local candidates including SC/ST candidates have been terminated.

ಶ್ರೀ ಕೆ. ಎಲ್. ಮರಿಸ್ವಾಮಿ.—ಅಧ್ಯಕ್ಷರೇ ಮಾನ್ಯ ಸಚಿವರು ಉತ್ತರ ಕೊಟ್ಟಿರುವುದು, ನಿಂತ ನೀರನ್ನು ಹರಿಯುವ ನೀರು ದಬ್ಬುವ ಹಾಗೆ ಆಗಿದೆ. ಕಾರಣವೇನೆಂದರೆ ಮಂಡ್ಯಾ ಜಿಲ್ಲೆಯಲ್ಲಿ ೪೦೦-೫೦೦ ಉಪಾಧ್ಯಾಯರ ಸಮಸ್ಯೆ ಈ ರೀತಿಯಾಗಿದೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗಲೀ ಎಂಬ ಉದ್ದೇಶದಿಂದ ಈ ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಂಡರು. ಈಗ ಒಂದು ಸ್ಪೆಷಲ್ ಆಜ್ಞೆ ಮಾಡಿ, ಆ ಆಜ್ಞೆ ನನಗೆ ಗೊತ್ತಿಲ್ಲ, ಮಾನ್ಯ ಮುಖ್ಯಮಂತ್ರಿಗಳು ೧೦ ತಿಂಗಳು ಸರ್ಕಾರಿ ಸೇವೆ ಮಾಡಿರತಕ್ಕ ನೌಕರರಿಗೆ ಪ್ರಾತಿನಿಧ್ಯ ಕೊಡಲಾಗುತ್ತದೆ ಎಂದು ಹೇಳಿದ್ದಾರೆ, ಆ ರೀತಿ ಇದ್ದರೂ ಕೂಡ ೧ ವರ್ಷ ಸೇವೆ ಸಲ್ಲಿಸಿರತಕ್ಕ ಉಪಾಧ್ಯಾಯರುಗಳನ್ನು ಈಗ ತೆಗೆದುಹಾಕಿದ್ದಾರೆ. ಅವರ ಗತಿ ಏನಾಗಿದೆ? ಜಿಲ್ಲಾ ಮಟ್ಟದ ನೇಮಕಾತಿ ಸಮಿತಿಯಿಂದಲೂ ಕೂಡ ನೇಮಕ ಮಾಡಿಕೊಂಡಿಲ್ಲ. ಇವತ್ತಿನದಿವಸ ೨೦೦ ಜನ ಉಪಾಧ್ಯಾಯರು ಕಂಗಾಲಾಗಿದ್ದಾರೆ, ಮುಂದಿನ ವಿದ್ಯಾಭಾಸವನ್ನು ಮೊಟಕುಗೊಳಿಸಿಕೊಂಡಿದ್ದಾರೆ, ೧೦ ತಿಂಗಳು ಕೆಲಸ ಮಾಡಲಿಕ್ಕೋಸ್ಕರ ಉದ್ಯೋಗ ವಿನಿಮಯ ಕಛೇರಿಯಲ್ಲಿ ಸೀನಿಯಾರಿಟಿಯನ್ನು ಕೂಡ ಕ್ಯಾನ್ಸಲ್ ಆಗಿದೆ, ವಯಸ್ಸು ಜಾಸ್ತಿಯಾಗಿರತಕ್ಕ ಯುವಕರಿದ್ದಾರೆ, ಅವರ ಪರಿಸ್ಥಿತಿ ಏನಾಗಬೇಕೆಂಬುದನ್ನು ಸರ್ಕಾರ ಪರಿಶೀಲನೆ ಮಾಡಬೇಕಾಗುತ್ತದೆ. ಹರಿಜನ- ಗಿರಿಜನ ವಿದ್ಯಾರ್ಥಿಗಳು ೨ ಸಾವಿರ ೩ ಸಾವಿರ ಡೊನೇಷನ್ ಕೊಟ್ಟು ಪ್ರಪೇಟ್ ಟಿ.ಸಿ.ಎಚ್. ಸಂಸ್ಥೆಗಳಲ್ಲಿ ತರಬೇತಿ ಪಡೆಯಲು ಸಾಧ್ಯವಾಗುತ್ತದೆಯೇ, ಸರ್ಕಾರಿ ಟಿ.ಸಿ.ಎಚ್. ಸಂಸ್ಥೆಯಲ್ಲಿ ಹರಿಜನ ಗಿರಿಜನರಿಗೆ ೧೮-೨೦ ಜನಗಳಿಗೆ ಅವಕಾಶ ದೊರೆಯಬಹುದು. ಇದನೆಲ್ಲಾ ಇಟ್ಟುಕೊಂಡು ಟಿ.ಸಿ.ಹೆಚ್. ಮಾಡಿದವರಿಗೆ ಆದ್ಯತೆ ಕೊಡುವುದಾದರೆ ನಿರುದ್ಯೋಗ ಸಮಸ್ಯೆಯನ್ನು ಯಾವ ರೀತಿ ನಿವಾರಣೆ ಮಾಡುತ್ತೀರಿ ನನಗಂತೂ ಆತಂಕವಾಗುತ್ತಿದೆ. ರಾಜ್ಯದಲ್ಲಿ ನನಗೆ ತಿಳಿದಮಟ್ಟಿಗೆ ಉಪಾಧ್ಯಾಯರ ಹುದ್ದೆಗಳು ಸುಮಾರು ೩೦

ಸಾವಿರ ಇರಬಹುದು. ೧೩ ಸಾವಿರ ಮಂದಿ ಅಧ್ಯಾಪಕರು ಕರ್ನಾಟಕದಲ್ಲಿದ್ದಾರೆ, ಅನೇಕ ಯಂಪಕರು ಉದ್ಯೋಗವಿಲ್ಲದೆ ಅಲೆದಾಡುತ್ತಿದ್ದಾರೆ. ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಬೇಕಾದರೆ ಏನು ಮಾಡಬೇಕು ? ಮಾನ್ಯ ಸಚಿವರು ಕಾನೂನನ್ನು ಸಡಿಲಮಾಡಿಕೊಂಡು ಹುದ್ದೆಗಳನ್ನು ಭರ್ತಿ ಮಾಡಲು ಯೋಚನೆ ಮಾಡಬೇಕು. ೧೯೭೫–೭೬ರಲ್ಲಿ ೨೦೦ ಜನ ೨ನೇ ದರ್ಜೆ ಗುಮಾಸ್ತರನ್ನು ರೆವಿನ್ಯೂ ಇಲಾಖೆಯಲ್ಲಿ ನೇಮಕ ಮಾಡಿಕೊಂಡಿದ್ದರೂ ಇನ್ನು ಕನ್‌ಫರ್ಮ್ ಮಾಡಿಲ್ಲ. ಅದೇರೀತಿ ೧೯೭೮–೭೯ರಲ್ಲಿ ೨೦೦ ಜನ ಡಾಕ್ಟರುಗಳನ್ನು ನೇಮಕ ಮಾಡಿಕೊಂಡಿದ್ದರೂ ಕನ್‌ಫರ್ಮ್ ಮಾಡಿಲ್ಲ. ಈಗ ತೆಗೆದು ಹಾಕಿರುವ ಅಧ್ಯಾಪಕರುಗಳನ್ನು ಕನ್‌ಫರ್ಮ್ ಮಾಡಿಕೊಂಡು ಎರವಲು ಸೇವೆಯ ಮೇಲೆ ಟಿ.ಸಿ.ಹೆಚ್.ಗೆ ತರಬೇತಿಗೆ ಕಳುಹಿಸಲು ಸರ್ಕಾರ ಏತಕ್ಕೆ ಯೋಚನೆ ಮಾಡಬಾರದು ? I want a categorical assurance from the Hon'ble Minister. Please confirm these candidates.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಅಧ್ಯಕ್ಷರೇ, ಲೋಕಲ್ ಕ್ಯಾಂಡಿಡೇಟ್ ಎಂದು ಅಪಾಯಿಂಟ್ ಮಾಡುವಾಗ ೯ ತಿಂಗಳು ಮಾತ್ರ ಎಂದು ಮಾಡುತ್ತೇವೆ. ಈ ವರ್ಷ ಖಾಲಿ ಬಿದ್ದ ಹುದ್ದೆಗಳನ್ನು ಭರ್ತಿ ಮಾಡಿದಾಗ ಕೆಲವರಿಗೆ ತೊಂದರೆಯಾಗಿದೆ. ಇದೇರೀತಿ ನಾಲ್ಕು ವರ್ಷಗಳಿಂದಲೂ ಲೋಕಲ್ ಕ್ಯಾಂಡಿಡೇಟ್‌ಗಳನ್ನು ೯ ತಿಂಗಳು ಸೇವೆ ಸಲ್ಲಿಸಲು ನೇಮಿಸಿಕೊಂಡು ನಂತರ ರಿಟ್ರೆಂಚ್ ಮಾಡುತ್ತೇವೆ. ನಾವು ಉಪಾಧ್ಯಾಯರುಗಳನ್ನು ನೇಮಕ ಮಾಡಿಕೊಳ್ಳುವಾಗ ಹರಿಜನ ಗಿರಿಜನ ಲೋಕಲ್ ಕ್ಯಾಂಡಿಡೇಟ್‌ಗಳಿಗೆ ಆದ್ಯತೆ ಕೊಡುತ್ತಾ ಬಂದರೂ ಕೆಲವರಿಗೆ ಸಹಾಯವಾಗುವುದಿಲ್ಲ. ಸರ್ಕಾರಿ ಆಜ್ಞೆಯ ಪ್ರಕಾರ ಲೋಕಲ್ ಕ್ಯಾಂಡಿಡೇಟ್ ಅಪಾಯಿಂಟ್‌ಮೆಂಟ್ ಮಾಡಿಕೊಳ್ಳುವಾಗ ಸರ್ಕಾರಿ ಆಜ್ಞೆಯಲ್ಲಿ ಈ ರೀತಿ ಇದೆ :

> "Such appointment shall be made for a maximum period of 9 months and on no account should they be continued from such period during which period regular recruitment shall be made."

ಈಗ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ಇತ್ತೀಚೆಗೆ ನಾವು ರಾಜ್ಯದಲ್ಲಿ ಎಲ್ಲಾ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿದ್ದೇವೆ. ಆ ಒಂದು ಪರಿಣಾಮವಾಗಿ ಲೋಕಲ್ ಕ್ಯಾಂಡಿಡೇಟ್‌ಗಳು ರಿಟ್ರೆಂಚ್ ಆಗಿದ್ದಾರೆ. ಲೋಕಲ್ ಕ್ಯಾಂಡಿಡೇಟ್‌ಗಳಾಗಿ ಕೆಲಸ ಮಾಡುತ್ತಿದ್ದವರು ಸಹ ಸ್ಪೆಷಲ್ ರಿಕ್ರೂಟ್‌ಮೆಂಟ್ ಕಮಿಟಿಗೆ ಅರ್ಜಿ ಹಾಕಿಕೊಂಡಿದ್ದವರು ಸೆಲೆಕ್ಟ್ ಆಗಿದ್ದಾರೆ. ರಿಕ್ರೂಟ್‌ಮೆಂಟ್ ಸಮಿತಿಯಲ್ಲಿ ವಯಸ್ಸನ್ನು ಪೆರಿಟ್ ಎಲ್ಲ ಅಧ್ಯತೆಯನ್ನು ಇಟ್ಟುಕೊಂಡು ಸಮಿತಿ ಮಾಡಿದ್ದೇವೆ. ಈಗ ಏನು ಲೋಕಲ್ ಕ್ಯಾಂಡಿಡೇಟ್ ಎಂದು ಅಪಾಯಿಂಟ್‌ಮೆಂಟ್ ಮಾಡಿದ್ದೇವೆ. ಅವರಿಗೆ Purely Temporary ಎಂದು ಮಾಡಿರುವುದರಿಂದ ಅವರನ್ನು ರೆಗ್ಯೂಲರೈಸ್ ಮಾಡುವುದಕ್ಕಾಗುವುದಿಲ್ಲ. ಲೋಕಲ್ ಕ್ಯಾಂಡಿಡೇಟ್ ಆಗಿ ತೆಗೆದುಕೊಳ್ಳುವಾಗಲೇ ೯ ತಿಂಗಳ ಕಂಟ್ರಾಕ್ಟ್ ಮೇಲೆ ನೇಮಕ ಮಾಡಿಕೊಂಡಿರುತ್ತೇವೆ.

† ಶ್ರೀ ಹಾರನಹಳ್ಳಿ ರಾಮಸ್ವಾಮಿ.—ಅಧ್ಯಕ್ಷರೇ ಮಾನ್ಯ ಸಚಿವರು ನಿಯಮಗಳನ್ನು ಏನು ಹೇಳಿದ್ದಾರೆ, ನಿಯಮಗಳ ಪ್ರಕಾರ ಹೇಳಿರುವುದನ್ನು ಒಪ್ಪಿಕೊಳ್ಳಬೇಕಾಗಿದೆ. ೧೪ ಸಾವಿರ ಜನ ನಿರುದ್ಯೋಗ ಪದವೀಧರರನ್ನು ಖಾಯಂಗೊಳಿಸುತ್ತೇವೆಂದು ಸರ್ಕಾರ ಈಗಾಗಲೇ ಹೇಳಿದೆ. ಕಾರಣ ೧೪೦ ರೂಪಾಯಿ ಪರಿಹಾರವನ್ನು ಕೊಡುತ್ತಿದ್ದೇವೆ. ಅವರು ಕೆಲಸ ಬಿಟ್ಟುಹೋದರೆ ಬೇರೆ ಕಡೆ ಎಲ್ಲಿಯಾದರೂ ಜೀವನ ಮಾಡಿಕೊಳ್ಳುತ್ತಾರೆ. ನಿಮ್ಮನ್ನು ವರ್ಗದ ಪಂಗಡದವರು ೯ ತಿಂಗಳು ಕೆಲಸ ಮಾಡಿರುವುದರಿಂದ ಅವರನ್ನು ಮನೆಗೆ ಕಳುಹಿಸದೆ ಅದೇ ನೀತಿಯನ್ನು ಅನುಸರಿಸಿ ಅವರನ್ನು ಕೆಲಸದಲ್ಲಿ ಏತಕ್ಕೆ ಖಾಯಂ ಮಾಡಬಾರದು ?. ಸರ್ಕಾರ ನಿಯಮಗಳನ್ನು ಮಾಡುತ್ತದೆ, ಆ ನಿಯಮಗಳಿಂದ ಯಾರಿಗಾದರೂ ತೊಂದರೆಯಾದರೆ ನಿಯಮವನ್ನು ಬದಲಾವಣೆ ಮಾಡಿಕೊಳ್ಳಬಹುದು. ಇದೂ ಕೂಡ ಅಂತಹದ್ದೆ ಸಮಸ್ಯೆಯಾಗಿದೆ, ಇದು ಕೇವಲ ಮಂಡ್ಯಾ ಜಿಲ್ಲೆಯಲ್ಲಿಯೇ ಇಲ್ಲ. ಈಗ ಉಪಾಧ್ಯಾಯರುಗಳನ್ನು ಏನು ನೇಮಕ ಮಾಡಿದ್ದಾರೆ ಅದು ಸಾಲದು. ಹೊಸದಾಗಿ ೫ ಸಾವಿರ ಜನ ಇರತಕ್ಕ ಪ್ರಾಥಮಿಕ ಶಾಲೆಗಳಿಗೆ ಉಪಾಧ್ಯಾಯರುಗಳು ಬೇಕಾಗಿದ್ದಾರೆ.

ಬಹಶಃ ಇವರುಗಳು ಸುಮಾರು ಒಂದು ಸಾವಿರಷ್ಟು ಜನ ಇರಬಹುದು ಎಂದು ನಾನು ಅಂದುಕೊಂಡಿದ್ದೇನೆ. ಆದರೆ ನನಗೆ ಈ ಬಗ್ಗೆ ಸರಿಯಾದ ಅಂಕಿ ಅಂಶ ಗೊತ್ತಿಲ್ಲ. ಆದುದರಿಂದ ಅವರಷ್ಟು ಜನರನ್ನೂ ಕೂಡ ಅವರ ಒಂದು ಅನುಭವ ಆಧಾರದ ಮೇಲೆ ಇವರನ್ನು ಖಾಯಂ ಮಾಡುವುದಕ್ಕೆ ತಾವು ಏತಕ್ಕೆ ಯೋಚನೆ ಮಾಡಬಾರದು ಎಂದು ಕೇಳುತ್ತೇನೆ. ನಾನೇನೂ ಈಗಲೇ ಆ ಬಗ್ಗೆ ಆಶ್ವಾಸನೆಯನ್ನು ಕೊಡಿ ಎಂದು ಹೇಳುವುದಿಲ್ಲ. ತಾವು ಈಗ ಸ್ಪೆಷಲಿಸ್ಟ್ ಸ್ಕ್ರೀನಲ್ಲಿ ಅವರ ವಯಸ್ಸಿನ ಒಂದು ಆಧಾರದ ಮೇಲೆ ಏನು ರೆಕ್ರೂಟ್‌ಮೆಂಟ್ ಮಾಡಿಕೊಂಡಿದ್ದೀರೋ ಅದೇರೀತಿಯಾಗಿ ಸ್ಪೆಷಲ್ ಆಗಿ ಇವರ ಒಂದು ಅನುಭವದ ಆಧಾರವನ್ನು ಗಣನೆಗೆ ತೆಗೆದುಕೊಂಡು ಇವರನ್ನು ರೆಗ್ಯುಲರೈಸ್ ಮಾಡುವುದಕ್ಕೆ ಏತಕ್ಕೆ ಯೋಚನೆ ಮಾಡಬಾರದು? ಇದನ್ನು ಪರಿಗಣಿಸುತ್ತೀರಾ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ .— ಇದು ಒಂದು ಪಾಲಿಸಿ ಮ್ಯಾಟರ್ ಆದರೂ ಕೂಡ ಮಾನ್ಯ ಸದಸ್ಯರು ಇದರ ಬಗ್ಗೆ ಹೇಳಿರುವುದನ್ನು ಗಮನದಲಿಟ್ಟುಕೊಂಡು ಒಂದು ತೀರ್ಮಾನ ತೆಗೆದು ಕೊಳ್ಳುತ್ತೇನೆ

† ಶ್ರೀ ಐ.ಪಿ.ಡಿ.ಸಾಲಪ್ಪ .— ರಾಜ್ಯಾಂಗದ ಪ್ರಕಾರ ಈ ವಿದ್ಯಾ ಇಲಾಖೆಯಲ್ಲಿ ೧೮ ಭಾಗ ಏನು ಇದೆ ಅದನ್ನು ತುಂಬುತ್ತೇವೆ ಅಂತ ಇದ್ದರೂ ಕೂಡ ನೀವು ಲೋಕಲ್ ಕ್ಯಾಂಡಿಡೇಟ್ಸ್ ಅನು ತೆಗೆದುಕೊಂಡಿದ್ದೀರಿ. ಈಗ ಏಡೆಡ್ ಸ್ಕೂಲ್ಸ್‌ಗಳಲ್ಲಿ ಟ್ರೈನಿಂಗ್ ಇಲ್ಲದೇ ಇದ್ದರೂ ಸಹ ಅವರನ್ನು ಮುಂದುವರೆಸುತ್ತಿದ್ದಾರೆ. ಮೊದಲು ಅವರನ್ನು ೯ ತಿಂಗಳು ಕಾಲ ತೆಗೆದುಕೊಂಡಿದ್ದರೂ ಕೂಡ ಮತ್ತೆ ೯ ತಿಂಗಳು ಅವರನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಆದುದರಿಂದ ನಾನು ಹೇಳುವುದೇನೆಂದರೆ ಸರ್ಕಾರ ಈ ಬಗ್ಗೆ ಮೊದಲೇ ಯೋಚನೆ ಮಾಡಿ ಎಸ್.ಸಿ. ಮತ್ತು ಎಸ್.ಟಿ. ಕ್ಯಾಂಡಿಡೇಟ್ಸ್‌ಗೆ ಏನು ಪರ್ಸೆಂಟೇಜ್ ಬರಬೇಕೋ ಅದನ್ನು ತುಂಬುವುದಕ್ಕೆ ಅವರಿಗೆ ಒಂದು ಟ್ರೈನಿಂಗ್ ಮಾಡಿಕೊಳ್ಳಬೇಕು ಹಾಗಾದರೆ ನಿಮ್ಮನ್ನು ರೆಗ್ಯುಲರೈಸ್ ಮಾಡುತ್ತೇವೆ. ಒಂದು ನಿರ್ಭಂದ ಹಾಕಿ ತೆಗೆದುಕೊಳ್ಳಬಹುದಾಗಿತ್ತು ಎಂದು ನನಗೆ ಅನಿಸುತ್ತದೆ. ಬಹುಶಃ ಸರ್ಕಾರ ಏನಾದರೂ ಅವರ ಮೇಲೇ ನಾದರೂ ಒಂದು ದ್ವೇಷಾಸೂಯೆಯನ್ನು ಸಾಧಿಸುವುದಕ್ಕೇನಾದರೂ ಈ ರೀತಿಯಾಗಿ ಅವರಿಗೆ ಟ್ರೈನಿಂಗ್ ಇಲ್ಲ ಎನ್ನುವ ಒಂದೇ ಒಂದು ಕಾರಣವನ್ನು ಸೂಚಿಸಿ ಅವರನ್ನು ಕಿತ್ತುಹಾಕಿದೆಯೇ ಆಥವಾ ಕಾನೂನನ್ನು ಬದಲಾವಣೆ ಮಾಡಿ ಅವರನ್ನು ರೆಗ್ಯುಲರೈಸ್ ಮಾಡಿ? ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಹಿಂದೆ ಡಾಕ್ಟರ್ಸ್ ಅನ್ನು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ೯ ತಿಂಗಳಿಗೆ ಅಂತ ತೆಗೆದುಕೊಂಡಾಗ ಮತ್ತೆ ಅವರನ್ನು ೯ ತಿಂಗಳು ಮುಂದುವರೆಸಿದರು, ಆವಾಗ ತಾವೂ ಸಚಿವರಾಗಿದ್ದಿರಿ. ಹೀಗೆ ಮತ್ತೆ ಮತ್ತೆ ಅವರನ್ನು ಮುಂದುವರೆಸುತ್ತಾ ಹೋದರು. ಆದೇ ರೀತಿ ಈಗ ತಾವು ಯಾರನ್ನು ಕೆಲಸದಿಂದ ತೆಗೆದುಹಾಕಿದ್ದೀರಿ ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಂಡು ಮುಂದುವರೆಸುವುದಕ್ಕೆ ಯೋಚನೆ ಮಾಡುತ್ತೀರಾ? ಮತ್ತು ಸರ್ಕಾರದವರು ಅವರನ್ನು ಎರಡು ವರ್ಷದೊಳಗೆ ಟ್ರೈನಿಂಗ್ ಮಾಡಿ ಕೊಳ್ಳಬೇಕು ಅಂತಾ ಏನಾದರೂ ಒಂದು ಕಂಡೀಷನ್ ಹಾಕಿ ಅವರನ್ನು ಟ್ರೈನಿಂಗ್ ಕಳುಹಿಸುವುದಕ್ಕೆ ಏನಾದರೂ ಒಂದು ವ್ಯವಸ್ಥೆ ಮಾಡುವುದು ತಮ್ಮ ಕೈಯ್ಯಲ್ಲಿದೆ. ಆ ರೀತಿ ಮಾಡಬೇಕು ಎಂದು ನಾನು ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ. ಮೊಹಿಯುದ್ದೀನ್ .— ಸ್ವಾಮಿ, ಎಲ್ಲಾ ಇಲಾಖೆಯಲ್ಲಿ ಹರಿಜನ—ಗಿರಿಜನರ ನೇಮಕಾತಿ ಬಗ್ಗೆ ಬ್ಯಾಕ್‌ಲಾಗ್ ಏನು ಇತ್ತು ಅದನ್ನು ಭರ್ತಿ ಮಾಡಬೇಕು ಎಂದು ಸರ್ಕಾರ ಒಂದು ಸರ್ಕ್ಯಾಲರ್ ಹೊರಡಿಸಿತ್ತು ಆ ಸರ್ಕ್ಯಾಲರ್ ಮತ್ತೆ ಯಾವ ರೂಪ ತಾಳಿತು ಅನ್ನುವುದು ನನಗೆ ಗೊತ್ತಿಲ್ಲ. ಈ ಇಲಾಖಾ ಮಂತ್ರಿಗಳು ಹೇಳುತ್ತಾರೆ. ಈ ಹರಿಜನ—ಗಿರಿಜನರನ್ನು ೯ ತಿಂಗಳು ಮಾತ್ರಕ್ಕೆ ಟೆಂಪರರಿಯಾಗಿ ನೇಮಿಸಿಕೊಂಡಿದ್ದೇವೆ ಎಂದು ಆದರೆ ಇದರಲ್ಲಿ ಎಷ್ಟು ೯ ತಿಂಗಳು ಕಾಲದ ವರೆಗೆ ನೇಮಿಸಿಕೊಂಡಿದ್ದಾರೆ ಅನ್ನುವುದನ್ನು ಹೇಳಲಿಲ್ಲಾ, ಇದರಲ್ಲಿ ಒಂದು ವರ್ಷ ಕೆಲಸ ಮಾಡಿದವರೂ

† Indicates that remarks or Speeches have not been revised by the member concerned.

ಇದ್ದಾರೆ, ಅದಕ್ಕೂ ಮುಂಚೆ ಕೆಲಸ ಮಾಡಿರತಕ್ಕಂಥಾವರೂ ಇದ್ದಾರೆ ಈ ಬಗ್ಗೆ ಅವರು ಸ್ಪಷ್ಟವಾದ ಉತ್ತರ ಕೊಟ್ಟಿಲ್ಲಾ ಹಿಂದೆ ಈ ಬಗ್ಗೆ ಒಂದು ಸರ್ಕುಲರ್ ಹೊರಡಿಸಿದ್ದರಲ್ಲಾ ಅದರ ಏನೊಂದುನೀತಿಯನ್ನು ಅನುಸರಿಸಿದ್ದೀರಿ ಅನ್ನುವುದನ್ನು ತಿಳಿಸಬೇಕು ಎಂದು ಕೇಳುತ್ತೇನೆ.

ಶ್ರೀ ಷಫಿ ಅಹಮದ್ .— ಈ ಉರ್ದು ಉಪಾಧ್ಯಾಯರ ಬಗ್ಗೆ ತಾ ಗಾಗಲೇ ನಾನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಕೆಲವು ಅಭ್ಯರ್ಥಿಗಳು ಫಸ್ಟ್ ಸ್ಯಾಂಡರ್ಡ್‌ನಲ್ಲಿ ಮತ್ತು ಸೆಕೆಂಡ್ ಸ್ಟ್ಯಾಂಡರ್ಡ್‌ನಲ್ಲಿ ಉರ್ದುವಿನಲ್ಲೇ ಓದಿ ಕಲಿತಿರುತ್ತಾರೆ. ಮತ್ತು ಹೈಸ್ಕೂಲಿಗೆ ಹೋದಾಗ ಮತ್ತು ಟಿ.ಸಿ.ಹೆಚ್.ಗೆ ಹೋದಾಗ ಮೀಡಿಯಂ ಆಫ್ ಇನ್‌ಸ್ಟ್ರಕ್ಷನ್ ಉರ್ದುವಿನಲ್ಲೇ ಇದೆ. ಪೂರ್ತಿ ವಿದ್ಯಾಭ್ಯಾಸ ಅವರದ್ದು ಉರ್ದುವಿನಲ್ಲಿ ಇದ್ದರೂ ಕೂಡ ಈ ಹಳೇ ಮೈಸೂರಿನಲ್ಲಿ ಈ ಉರ್ದು ಟೀಚರ್ಸ್ ಅನ್ನು ರೆಕ್ರೂಟ್‌ಮೆಂಟ್ ಮಾಡುವಾಗ ಇವರನ್ನು ಬಿಟ್ಟುಬಿಟ್ಟಿದ್ದಾರೆ, ಇವರ್ಯಾರಿಗೂ ಕೆಲಸ ಸಿಕ್ಕಿಲ್ಲಾ. ಆದುದರಿಂದ ಇದರ ಬಗ್ಗೆ ಒಂದು ತಿದ್ದುಪಡಿಯಾಸ್ಸಾದರೂ ತಂದು ಹಳೇ ಮೈಸೂರಿನಲ್ಲಿ ಟಿ.ಸಿ.ಹೆಚ್. ಅನ್ನು ಯಾರು ಉರ್ದುವಿನಲ್ಲಿ ಪಾಸು ಮಾಡಿಕೊಂಡಿರುತ್ತಾರೋ ಅವರಿಗೆ ಈ ಟೀಚರ್ ಪೋಸ್ಟ್ ಸಿಕ್ಕುವ ಹಾಗೆ ಅವಕಾಶ ಮಾಡಿ ಕೊಡುತ್ತೀರಾ?

ಶ್ರೀ ಕೆ.ಎಲ್. ಮುರಿಸ್ವಾಮಿ .— ಅಧ್ಯಕ್ಷರೇ ಈ ಸ್ಪೆಷಲ್ ರೆಕ್ರೂಟ್‌ಮೆಂಟ್ ಬಗ್ಗೆ ಮಾನ್ಯ ಸಚಿವರು ಬಹಳ ವಿಶದವಾಗಿ ಹೇಳಿದ್ದಾರೆ. ಇದು ಒಂದು ಪಾಲಿಸಿ ಮ್ಯಾಟರ್ ಅನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಾನು ಹೇಳುತ್ತಾ ಇರುವುದೇನೆಂದರೆ ಸುಮಾರು ೨೦೦ ಮಂದಿ ಯುವಕರು ಈ ಒಂದು ಪಂಗಡಕ್ಕೆ ಸೇರಿದಂಥಾವರು ಈ ದಿನ ಬೀದಿ ಪಾಲಾಗಿದ್ದಾರೆ. ಅಲ್ಲದೆ ಅವರಿಗೆ ಈಗ ಅವರ ವಯಸ್ಸನ್ನು ಮೀರಿರುವುದರಿಂದ ಅವರ ಮುಂದಿನ ವಿದ್ಯಾಭ್ಯಾಸಕ್ಕೂ ಮೊಟಕಾಗಿದೆ ಮತ್ತು ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜಿನಲ್ಲೂ ಕೂಡ ಸೀನಿಯಾರಿಟಿ ಹೋಗಿಬಿಟ್ಟಿದೆ. ಈ ಒಂದು ಕಾರಣದಿಂದ ಸ್ಪೆಷಲ್ ರೆಕ್ರೂಟ್‌ಮೆಂಟ್‌ನವರಿಗೆ ಆದ್ಯತೆ ಕೊಡಬೇಕೆಂದು ಹೇಳುತ್ತೇನೆ. ಇದಕ್ಕೇನೂ ಕಾನೂನು ಏನೂ ಮಾಡಿಲ್ಲಾ. ಆದರೂ ನಾನು ಸರ್ಕಾರವನ್ನು ನೇರವಾಗಿ ಆಪಾದನೆ ಮಾಡುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಈಗ ಹರಿಜನ—ಗಿರಿಜನ ಕ್ಯಾಂಡಿಡೇಟ್ಸ್ ಅನ್ನು ಈ ಕೆಲಸದಿಂದ ಕಿತ್ತು ಹಾಕಿದ್ದೀರಲ್ಲಾ ಈ ಬಗ್ಗೆ ಒಂದು ಕಾನೂನು ಮಾಡಿ ಏತಕ್ಕಾಗಿ ಅವರನ್ನು ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಬಾರದು ಎಂದು ನಾನು ತಮ್ಮನ್ನು ಕೇಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ .— ಮಾನ್ಯ ಅಧ್ಯಕ್ಷರೇ, ಈ ಹರಿಜನ—ಗಿರಿಜನ ಕ್ಯಾಂಡಿಡೇಟ್ಸ್ ಬಗ್ಗೆ ಆದ್ಯತೆ ಕೊಡಬೇಕು ಮತ್ತು ಅವರಿಗೆ ಏನು ಪರ್ಸೆಂಟೇಜ್ ಇದೆ ಅದರಂತೆ ಫಿಲ್ ಅಪ್ ಮಾಡಬೇಕು ಅನ್ನುವುದನ್ನೇ ಸರ್ಕಾರ ಗಮನದಲ್ಲಿಟ್ಟುಕೊಂಡು ಈ ಸ್ಪೆಷಲ್ ರೆಕ್ರೂಟ್‌ಮೆಂಟ್ ಮಾಡಿದೆ.

ಅಧ್ಯಕ್ಷರು .— ಹಿಂದೆ ಈ ಬಗ್ಗೆ ಬ್ಯಾಕ್‌ಲಾಗ್ ಏನು ಇತ್ತು ಅದನ್ನು ತುಂಬುವುದಕ್ಕೆ ಈಗ ಇರತಕ್ಕಂಥಾ ವೇಕೆನ್ಸಿಯಲ್ಲಿ ೫೦ ಪರ್ಸೆಂಟ್ ಆಪ್ಷನ್ನು ಭರ್ತಿ ಮಾಡಬೇಕು ಎಂದು ಇತ್ತು. ಅದು ಏನಾಯಿತು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ .— ಈಗ ಹರಿಜನ—ಗಿರಿಜನ ಕ್ಯಾಂಡಿಡೇಟ್ಸ್‌ನಲ್ಲಿ ಯಾರು ಟ್ರೈನ್ಡ್ ಪರ್ಸನ್ಸ್ ಇರುತ್ತಾರೋ ಅವರಿಗೆ ಆದ್ಯತೆ ಕೊಡುತ್ತೇವೆ. Where there is not sufficient number of candidates, then we will take the untrained SC/ST candidates also. ಇದಕ್ಕೆ ಪ್ರಾವಿಷನ್ ಇದ್ದೇ ಇದೆ.

ಇನ್ನು ಉರ್ದು ಟೀಚರ್ಸ್ ಬಗ್ಗೆ ಹೇಳುವುದಾದರೆ ಈ ವಿಷಯವನ್ನು ಹಿಂದೆ ಈ ಸಭೆಯಲ್ಲಿ ಎತ್ತಿದ್ದಾರೆ. ಅಲ್ಲದೆ ಸರ್ಕಾರಕ್ಕೆ ನಾನಾ ಕಡೆಗಳಿಂದ ಈ ಬಗ್ಗೆ ಕೋರಿಕೆಗಳು ಬಂದು ಇದರ ಬಗ್ಗೆ ಕೋರಿಕೆಗಳು ಬಂತು ಇದರ ಬಗ್ಗೆ ಒಂದು ಅಮೆಂಡ್‌ಮೆಂಟ್ ಮಾಡಬೇಕೆನ್ನುವುದು ಸರ್ಕಾರಕ್ಕೆ ಈಗಾಗಲೇ ಗೊತ್ತಾಗಿದೆ. ಆದಷ್ಟು ಜಾಗ್ರತೆ ಈ ಬಗ್ಗೆ ಅಮೆಂಡ್‌ಮೆಂಟ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇನ್ನು ಈ ರೀತಿಯಾಗಿ ಟೆಂಪರರಿಯಾಗಿ ಮಾಡುವುದಕ್ಕೆ ಈ ತರಹ ಒಂದು ಸ್ಪೆಷಲ್ ರೆಕ್ರೂಟ್‌ಮೆಂಟ್‌ನ್ನು ಲೋಕಲ್ ಕ್ಯಾಂಡಿಡೇಟ್ಸ್ ಆಗಿ ತೆಗೆದುಕೊಳ್ಳುವುದಕ್ಕೆ ಮಾಡಬಾರದು ಅನ್ನುವ ಪ್ರಶ್ನೆ

ಯನ್ನು ಎತ್ತಿದ್ದಾರೆ. ತಮಗೆ ಹೇಳಬೇಕಾದರೆ ನಾವು ಲೋಕಲ್ ಕ್ಯಾಂಡಿಡೇಟ್ಸ್ ಅನ್ನು ತೆಗೆದುಕೊಳ್ಳಬೇಕಾದರೆ ನಾವು ಅದ್ಯತೆ ಕೊಡುವುದು ಹರಿಜನ—ಗಿರಿಜನರಿಗೆ ಮಾತ್ರ. ಈ ಒಂದು ಆದ್ಯತೆ ಅವರಿಗೆ ನಾವು ಕೊಡುವುದರಿಂದ ಮುಂಚೆ ಅವರನ್ನು ರೆಕ್ರೂಟ್‌ಮೆಂಟ್ ಮಾಡುವಾಗ ಅವರ ಪರ್ಸೆಂಟೇಜ್ ಎಷ್ಟು ಇದೆ ಅವರ ಪರ್ಸೆಂಟೇಜ್ ಏನು ಇದೆ, ಅವರಿಗೆ ಸ್ಪೆಷಲ್ ಆಗಿ ರಿಸರ್ವೇಷನ್ ಏನು ಇದೆ ಆದನ್ನು ನೋಡಿಕೊಂಡೇ ಕ್ಯಾಟಗಾರಿಕಲ್ ಆಗಿ ಆ ವೇಕೆನ್ಸಿಯನ್ನು ಭರ್ತಿ ಮಾಡುವುದಕ್ಕೆ ಸಾಧ್ಯವಾಗುತ್ತದೆ.

ಶ್ರೀ ಆತ್ಮಾನಂದ.—ಎಲ್ಲಿ ಸಫಿಷಿಯೆಂಟ್ ಆಗಿ ಟ್ರೈನ್ಡ್ ಕ್ಯಾಂಡಿಡೇಟ್ಸ್ ಈ ಪಂಗಡದವರು ಸಿಕ್ಕುವುದಿಲ್ಲವೋ ಅಂಥಾ ಕಡೆ ಅನ್‌ಟ್ರೈನ್ಡ್ ಆದವರನ್ನು ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದೀರಿ. ತಮಗೆ ಹೇಳಬೇಕಾದರೆ ನಮ್ಮ ಜಿಲ್ಲೆಯಲ್ಲಿ ೬–೭ ಜನ ಟಿ.ಸಿ,ಹೆಚ್. ನವರು ಸಿಕ್ಕಬಹುದು. ಉಳಿಕೆ ಯವರನ್ನು ಬೇರೆ ಬೇರೆ ಜಿಲ್ಲೆಗಳಿಂದ ಯಾರು ಪಿ.ಯು.ಸಿ. ನಲ್ಲಿ ಎಜುಕೇಷನ್ ಒಂದು ಸಬ್ಜೆಕ್ಟ್ ಅನ್ನು ಆಪ್ಷನಲ್ ಆಗಿ ತೆಗೆದುಕೊಂಡಿರುತ್ತಾರೋ ಅಂಥಾವರನ್ನು ನೇಮಿಸಿಕೊಂಡಿದ್ದಾರೆ. ರೆಕ್ರೂಟ್‌ಮೆಂಟ್ ಆ ರೀತಿಯಾಗಿ ಮಾಡಿಕೊಂಡಿದ್ದಾರೆ. ಮಾನ್ಯ ಪಾರ್ಲಿಮೆಂಟರಿಯವರು ಈ ಬಗ್ಗೆ ಚೆನ್ನಾಗಿ ಪ್ರಕ್ಟಪಡಿಸಿದ್ದಾರೆ, ಆದುದರಿಂದ ನಾನು ತಮ್ಮ ಗಮನಕ್ಕೆ ತರುವುದೇನೆಂದರೆ ಇದರಿಂದ ಈವೊತ್ತಿನ ದಿವಸ ನೂರಾರು ಜನ ಯುವಕರು ಉದ್ಯೋಗ ಇಲ್ಲದೆ ತೊಡಗಿದ್ದಾರೆ. ಅಲ್ಲದೆ ಬಹಳಷ್ಟು ಜನರಿಗೆ ಇದರಿಂದ ಚಿಂತಾಜನಕವಾಗಿದೆ. ಇಷ್ಟೇ ಅಲ್ಲದೆ ಅವರಿಗೆ ಈ ಕೆಲಸ ಸಿಕ್ಕದೇ ಇರುವುದರಿಂದ ಮೊದಲು ಇವರಿಗೆ ಎಂಪ್ಲಾಯ್‌ಮೆಂಟ್ ಎಕ್ಸಛೆಂಜ್‌ನಲ್ಲಿ ಏನು ಒಂದು ಸೀನಿಯಾರಿಟಿ ಇತ್ತೋ ಅದನ್ನೂ ಸಹ ಕಳೆದು ಕೊಂಡಿದ್ದಾರೆ, ಮತ್ತು ಈ ಒಂದು ಹಂಗಾಮಿ ಕೆಲಸದಿಂದ ಅವರು ಓದುವುದನ್ನೂ ಮುಂದುವರೆಸಿಲ್ಲ. ಅವರು ಈ ಒಂದು ಕೆಲಸವನ್ನೇ ನಂಬಿಕೊಂಡಿದ್ದರು. ಈ ಡಿ. ಎಲ್.ಆರ್.ಸಿ. ಕಮಿಟಿಯಲ್ಲಿ ಆಂಥಾ ವರಿಗೆ ಆದ್ಯತೆ ಸಿಕ್ಕಿಲ್ಲಾ. ಆದುದರಿಂದ ಇದನ್ನು ಮುಂದಾದರೂ ಸರಿಪಡಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಪಿ: ಯು. ಸಿ. ನಲ್ಲಿ ಎಜುಕೇಷನ್ ಒಂದುಸಬ್ಜಕ್ಟ್ ಅನ್ನು ಆಪ್ಷನಲ್ ಆಗಿ ತೆಗೆದುಕೊಂಡು ಓದಿದವರನ್ನು It is equivalent to T. C. H. ಎಂದು ಪರಿಗಣಿಸುತ್ತೇವೆ. ಹಾಗೆ ಟಿ. ಸಿ. ಹೆಚ್. ಆದವರನ್ನೂ ಕೂಡ ತೆಗೆದುಕೊಳ್ಳುತ್ತೇವೆ ಪಿ. ಯು. ಸಿ. ಆದವರೂ ಕೂಡ ಈ ಒಂದು ಆಧಾರದ ಮೇಲೆ ತೆಗೆದುಕೊಂಡಿದ್ದೇವೆ. ಮುಂದೆ ಹೊಸ ದಾಗಿ ಏನಾದರೂ ಎಸ್. ಸಿ. ಮತ್ತು ಎಸ್. ಟಿ. ಕ್ಯಾಂಡಿಡೇಟ್ಸ್ ಅವರನ್ನು ತೆಗೆದುಕೊಳ್ಳಬೇಕಾದರೆ ಇವರಿಗೂ ಒಂದು ಎಕ್ಸೆಮ್‌ಷನ್ ಕೊಡುತ್ತೇವೆ. Where there is and sufficient number of trained candidates, we will take the untrained SC/ST candidates also. ಎಸ್. ಸಿ. ಎಸ್. ಟಿ. ಯಲ್ಲಿ ಟ್ರೈನಿಂಗ್ ಕ್ಯಾಂಡಿಡೇಟ್ಸ್ ಸಿಕ್ಕದೇ ಹೋದರೆ ಅನ್‌ಟ್ರೈನ್ಡ್ ಕ್ಯಾಂಡಿಡೇಟ್ಸ್ ಅನ್ನೂ ಸಹ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಐ. ಪಿ. ಡಿ. ಸಾಲಪ್ಪ.—ಮಾನ್ಯ ಅಧ್ಯಕ್ಷರೇ, ಈ ವಿಷಯ ತಮಗೆ ಗೊತ್ತಿರಬೇಕು. ಎಲ್ಲಾ ಇಲಾಖೆಯಲ್ಲೂ ಕೆಲವರಿಗೆ ವಿದ್ಯಾರ್ಹತೆ ಇಲ್ಲದೇ ಹೋದರೆ ಅವರನ್ನು ರೆಕ್ರೂಟ್‌ಮೆಂಟ್ ಮಾಡಿಕೊಂಡು ಟ್ರೈನಿಂಗ್ ಗೆ ಇಂಗ್ಲೆಂಡ್‌ಗೋ, ಅಮೇರಿಕಾಕ್ಕೋ ಯಾವುದಾದರೂ ಪರದೇಶಕ್ಕೆ ಕಳುಹಿಸಿ ಟ್ರೈನಿಂಗ್ ಮಾಡಿಸುತ್ತಾರೆ. ಅದೇ ರೀತಿಯಾಗಿ ಈ ಪ್ರೈಮರಿ ಸ್ಕೂಲ್ ಉಪಾಧ್ಯಾಯರನ್ನೂ ಕೂಡ ಈಗ ಅಪಾಯಿಂಟ್ ಮಾಡಿಕೊಂಡಿರುವವರನ್ನು ನಮ್ಮ ಲೋಕಲ್‌ನಲ್ಲಿ ಇರತಕ್ಕಂಥಾ ಟ್ರೈನಿಂಗ್‌ಗೇನೇ ಏತಕ್ಕೆ ಕಳುಹಿಸಬಾರದು, ಏನು ಕಷ್ಟವಾಗುತ್ತದೆ, ಅದಕ್ಕೆ ಏರ್ಪಾಡು ಮಾಡುವುದಕ್ಕೆ ತೊಂದರೆ ಏನು ? ಈ ಬಗ್ಗೆ ಜಿಲ್ಲೆಗೊಂದು ಕಾಲೇಜನ್ನೋ ಅಥವಾ ಟ್ರೈನಿಂಗ್ ಸ್ಕೂಲ್ ಒಂದನ್ನೋ ಏತಕ್ಕೆ ಮಾಡಬಾರದಂಥ ಪ್ರತಿಯೊಂದು ಜಿಲ್ಲೆಗೂ ಒಂದೊಂದನ್ನು ಮಾಡಿದರೆ ಈ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಕ್ಯಾಂಡಿಡೇಟ್ಸ್ ಟ್ರೈನಿಂಗ್ ತೆಗೆದುಕೊಳ್ಳುವುದಕ್ಕೆ ಅವಕಾಶ ಸಿಕ್ಕುತ್ತದೆ; ಅವರು ಈ ದಿಶೆ ಯಲ್ಲಿ ಟ್ರೈನಿಂಗ್ ಮಾಡಿಕೊಳ್ಳುತ್ತಾರೆ. ಅಲ್ಲದೇ ಈ ಷೆಡ್ಯೂಲ್ಡ್ ಕ್ಯಾಸ್ಟ್‌ನವರ ರೆಪ್ರೆಸೆಂಟೇಷನ್ ಏನಿದೆ ಅದರ ಪ್ರಕಾರ ಪೋಸ್ಟ್ ಫಿಲ್ ಆಪ್ ಮಾಡಿದಹಾಗೆ ಕೂಡ ಆಗುತ್ತದೆ. ಆದ್ದರಿಂದ ಇದರ ಬಗ್ಗೆ ತಾವು ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

SRI P. K. RANGANATH.—It is very evident that even though most of these teachers are untrained, they have been recruited temporarily as local candidates. For nine months they have training in the school itself and subsequently these teachers have been taken and once our needs are satisfied we terminate them and again we are going in for recruitment of trained teachers, Don't you think that nine months' training has already been given to them and with that experience they can be confirmed or asked to continue their service in schools ?

SMT. NAGAMMA C. KESHAVA MURTHY.—ಅವರು ಏನು ಕೆಲಸಮಾಡುತ್ತಾರೆ, It cannot be equated with two years T C H training. Anyway ಈಗ ಅಲ್ಲಿ ಎಸ್. ಸಿ. ಮತ್ತು ಎಸ್. ಟಿ ಅಭ್ಯರ್ಥಿಗಳಲ್ಲಿ ಟ್ರೈನ್ಡ್ ಟೀಚರ್ಸ್ ಸಿಕ್ಕುವುದಿಲ್ಲ ಎಂದು ಗೊತ್ತಾದ್ದರಿಂದ ಅವರಲ್ಲಿ ಅನ್‌ಟ್ರೈನ್ಡ್ ಟೀಚರ್ಸನ್ನು ತೆಗೆದುಕೊಂಡು ಅವರನ್ನು ಟ್ರೈನಿಂಗ್‌ಗೆ ಕಳಿಸುತ್ತೇವೆ ಎನ್ನುತಕ್ಕಂಥ ಮಾತನ್ನು ನಾನು ಈಗಾಗಲೇ ಹೇಳಿದ್ದೇನೆ.

SRI P. K. RANGANATH.— We know very clearly that most of these teachers are untrained because SC/ST preference is given to them in recuritment.....

MR. SPEAKER.—I have called Mrs. Motamma.

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೇ, ಈ ಸಾರಿ ಆಗಿರತಕ್ಕಂಥ ಪ್ರೈಮರಿ ಶಾಲೆಯ ಉಪಾಧ್ಯಾಯರ ಆಯ್ಕೆ ಒಂದು ರೀತಿಯಿಂದ ಉತ್ತಮವಾದ ಆಯ್ಕೆಯಾಗಿದೆ. ಆದರೆ ಇದರಲ್ಲಿ ಹರಿಜನಗಿರಿಜನರಿಗೆ ಬಹಳ ತೊಂದರೆಯಾಗಿದೆ. ಮೊನ್ನೆದಿವಸ ಮಾನ್ಯ ಸದಸ್ಯರು ಈ ಬಗ್ಗೆ ತಮ್ಮ ಆಂತಕವನ್ನು ವ್ಯಕ್ತಪಡಿಸಿದ್ದಾರೆ. ನನ್ನ ಜಿಲ್ಲೆಯಲ್ಲಿ ಈ ವಿಚಾರದಲ್ಲಿ ಸುಮಾರು ೪೧೦ ವೇಕೆನ್ಸಿ ಇತ್ತು. ಆ ಹುದ್ದೆಗಳಿಗೆ ಹರಿಜನಗಿರಿಜನ ಉಪಾಧ್ಯಾಯರುಗಳನ್ನು ನೇಮಕ ಮಾಡಿದ್ದು ಅವರು ಸುಮಾರು ೧ ವರ್ಷದ ಕಾಲ ಕೆಲಸ ಮಾಡಿದ್ದಾರೆ. ಅವರೆಲ್ಲರೂ ಈಗ ಟರ್ಮಿನೇಟ್ ಆಗಿದ್ದಾರೆ. ಹಿಂದೆ ಹರಿಜನಗಿರಿಜನರಲ್ಲಿ ಟಿ. ಸಿ. ಎಚ್. ಟ್ರೈನಿಂಗ್ ಆಗದವರನ್ನು ಆಯ್ಕೆ ಮಾಡುವುದಕ್ಕೆ ಒಂದು ಗೌರ್ನಮೆಂಟ್ ಆರ್ಡರ್ ಪ್ರಕಾರ ಅವಕಾಶ ಇತ್ತು. ಆ ಪ್ರಕಾರವಾಗಿ ಈ ಸಲ ಉಪಾಧ್ಯಾಯರ ಸೆಲೆಕ್ಷನ್‌ನಲ್ಲಿ ಈ ಎಸ್. ಸಿ. ಎಸ್. ಟಿ. ಅನ್‌ಟ್ರೈನ್ಡ್ ಕ್ಯಾಂಡಿಡೇಟ್ಸನ್ನು ಸೆಲೆಕ್ಟ್ ಮಾಡಿಲ್ಲ. ನಮ್ಮ ಚಿಕ್ಕಮಗಳೂರಿನಲ್ಲಿ ೪೫೫ ಉಪಾಧ್ಯಾಯರ ಹುದ್ದೆಗಳು ಖಾಲಿ ಇದ್ದವು. ಆದರೆ ೧೫೫ ಪೋಸ್ಟ್‌ಗಳನ್ನ ಮಾತ್ರ ಸೆಲೆಕ್ಟ್ ಮಾಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ಹರಿಜನಗಿರಿಜನ ಉಪಾಧ್ಯಾಯರು ತೀರಾ ಕಡಿಮೆ ಇದ್ದಾರೆ. ಮಂಡ್ಯ ಜಿಲ್ಲೆಯಲ್ಲಿ ೭೮ ರಿಸರ್ವೇಷನ್ ಪೋಸ್ಟ್ ಇದ್ದರೆ ಅದರಲ್ಲಿ ೯ ಪೋಸ್ಟ್‌ಗಳಿಗೆ ಮಾತ್ರ ನಮ್ಮ ಅಭ್ಯರ್ಥಿಗಳು ಸೆಲೆಕ್ಟ್ ಆಗಿದ್ದಾರೆ. ಎಸ್. ಸಿ. ಎಸ್ ಟಿ. ಅನ್‌ಟ್ರೈಸ್ಡ್ ಉಪಾಧ್ಯಾಯರಿಗೆ ಅದರಲ್ಲಿ ಪೋಸ್ಟ್ ಸಿಕ್ಕಿಲ್ಲ ಅಲ್ಲದೇ ಟಿ. ಸಿ. ಎಚ್. ಆಗಿರುವ ಎಸ್. ಸಿ. ಎಸ್. ಟಿ. ಟೀಚರ್ಸ್‌ಗೂ ಅದರಲ್ಲಿ ಅವಕಾಶ ಸಿಕ್ಕಿಲ್ಲ. ಈ ರೀತಿಯಲ್ಲಿ ಅವರಿಗೆಲ್ಲಾ ತೊಂದರೆಯಾಗಿರುವುದರಿಂದ ಹಿಂದೆ ಹೇಗೆ ಈ ಎಸ್. ಸಿ. ಎಸ್. ಟಿ. ಅನ್‌ಟ್ರೈನ್ಡ್ ಟೀಚರ್ಸನ್ನು ತೆಯ್ಕೆ ಮಾಡುವುದಕ್ಕೆ ಅವಕಾಶವಿತ್ತೋ ಆದೇರೀತಿಯಲ್ಲಿ ಅನ್‌ಟ್ರೈನ್ಡ್ ಟೀಚರ್ಸನ್ನು ಆಯ್ಕೆ ಮಾಡಿಕೊಂಡು ಅವರಿಗೆ ಟ್ರೈನಿಂಗ್ ಕೊಡತಕ್ಕಂಥ ವ್ಯವಸ್ಥೆ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಿದರೆ ಹರಿಜನಗಿರಿಜನ ಉಪಾಧ್ಯಾಯರಿಗೆ ತುಂಬಾ ಅನುಕೂಲವಾಗುತ್ತದೆ. ಈ ಟ್ರೈನಿಂಗ್ ಕೊಡತಕಂಥಾದರಲ್ಲೂ ಕೂಡ ಅವರಿಗೆ ೧೮ ಪರ್ಸೆಂಟ್ ಕೊಡುವುದರಲ್ಲಿ ಏನೂ ಆರ್ಥವಿಲ್ಲ. ಈಗ ೧೦ ಜನ ಹರಿಜನಗಿರಿಜನ ಉಪಾಧ್ಯಾಯರನ್ನು ತೆಗೆದುಕೊಂಡರೆ ಆ ೧೦ ಜನರಿಗೂ ಟ್ರೈನಿಂಗ್ ಕೊಡಬೇಕೆಂದು ನಾನು ಕೇಳಿಕೂಳ್ಳುತ್ತೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ. —ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಗೆ ನಾನು ಈಗಾಗಲೇ ಉತ್ತರವನ್ನು ಕೊಟ್ಟಿದ್ದೇನೆ. ಈ ಹರಿಜನಗಿರಿಜನರಲ್ಲಿ ಅನ್‌ಟ್ರೈನ್ಡ್ ಕ್ಯಾಂಡಿಡೇಟ್ಸ್ ತೆಗೆದುಕೊಂಡು ಟ್ರೈನಿಂಗ್ ಕಳಿಸುವುದಕ್ಕೆ ನಾವು ವ್ಯವಸ್ಥೆ ಮಾಡುತ್ತೇವೆ. ಈ ಹರಿಜನಗಿರಿಜನರ ವಿಷಯದಲ್ಲಿ ಮಾತ್ರ ನಾವು ಇದನ್ನು ಕನ್‌ಸಿಡರ್ ಮಾಡುತ್ತೇವೆ.

ಶ್ರೀ ಐ. ಪಿ. ಡಿ. ಸಾಲಪ್ಪ.—ಸ್ವಾಮಿ, ನಾನು ಈ ಬಗ್ಗೆ ಲಾಸ್ಟ್ ಸಪ್ಲಿಮೆಂಟರಿಯನ್ನು ಕೇಳಿ ಬಿಡುತ್ತೇನೆ.

MR. SPEAKER.—Hon'ble Minister has given some assurance in this regard. So we shall go to the next subject.

FINANCIAL BUSINESS

Voting of Deamands for Grants of 1981-82 deamand No, 20– Food & Civil Supplies.

SRI MANIK RAO PATIL. (Minister for Food & Civil supplies) :

Sir, on the recommendation of the Governor, I beg to move;

"That a sum not exceeding Rs, 1,35,66,000 on Revenue Account and Rs. 21,65,03,000 on capital Account inclusive of the sum granted on account be granted to the Government to defray the charges which will come in course of payment during the financial year ending 31st day of March 1982 in respect of Food and Civil Supplies."

The question was proposed

† ಶ್ರೀ ಎಸ್.ಎಂ ಶೀರ್ನಾಳಿ ಚಂದ್ರಶೇಖರ್,—ಮಾನ್ಯ ಅಧ್ಯಕ್ಷರೇ, ಈ ಕರ್ನಾಟಕ ರಾಜ್ಯದ ಆಹಾರ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಬೆಂಬಲಿಸಿ ಎರಡು ವಿಷಯ ಗಳನ್ನು ಮಾತನಾಡುವುದಕ್ಕೆ ಬಯಸುತ್ತೇನೆ. ಇದು ಬಹಳ ಗುರುತರವಾದ ಜವಾಬ್ದಾರಿ ಇರತಕ್ಕಂಥ ಇಲಾಖೆ. ಇದನ್ನು ಅತಂತ್ಯ ಮೃದು ಸ್ವಭಾವದವರಾದ ಶ್ರೀಮಾನ್ ಮಾಣಿಕರಾವ್ ಪಾಟೀಲ್‌ರವರಿಗೆ ವಹಿಸಿಕೊಟ್ಟಿದ್ದಾರೆ. ಅವರಿಗೆ ಮೊದಲೇ ಆರೋಗ್ಯ ಸರಿಯಿಲ್ಲ. ಅವರಿಗೆ ಡಯಾಬಿಟಿಸ್ ಇರುತ್ತದೆ, ಬ್ಲಡ್‌ಪ್ರೆಷರ್ ಇರುತ್ತದೆ–ಬಹಳ ಟೆನ್‌ಷನ್ ಇರತಕ್ಕಂಥ ಈ ಇಲಾಖೆಯನ್ನು ಅವರು ಹೇಗೆ ಸುಧಾರಣೆ ಮಾಡುತ್ತಾರೆಯೋ ನನಗಂತೂ ಅರ್ಥವಾಗುತ್ತಾ ಇಲ್ಲ. ಅವರ ಕಾಯಿಲೆಗೆ ಇಂತಹ ಒಂದು ಟೆನ್‌ಷನ್ ಇರಬಾರದು. ಇದರಲ್ಲಿ ಅವರು ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕೆಂದರೆ ಬಹಳ ಕಷ್ಟ.

ಅಧ್ಯಕ್ಷರು.—ನೀವು ದಯವಿಟ್ಟು ಫುಡ್ ಅಂಡ್ ಸಿವಿಲ್ ಸಪ್ಲೈ ಬಗ್ಗೆ ಮಾತನಾಡಿ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಅದನ್ನೇ ಮಾತನಾಡುತ್ತಿದ್ದೇನೆ ಸ್ವಾಮಿ. ಈ ಇಲಾಖೆಯೊಳಗೆ ಅವರು ಒಳ್ಳೆಯ ಹೆಸರನ್ನು ತೆಗೆದುಕೊಳ್ಳತಕ್ಕಂಥಾದ್ದು ಬಹಳ ಕಷ್ಟ ಇದೆ. ಏನು ಮಾಡಿದರೂ ಕೂಡ ಒಂದಲ್ಲ ಒಂದು ಊನವನ್ನು ಎತ್ತಿ ಹೇಳತಕ್ಕಂಥಾದ್ದು ಮನುಷ್ಯನ ಸ್ವಭಾವ. ಅದರಲ್ಲೂ ಕೂಡ ನೇರವಾಗಿ ಬಿನಬಳಕೆಯ ವಸ್ತುಗಳನ್ನು ವಿತರಣೆ ಮಾಡತಕ್ಕಂಥ ಇಲಾಖೆ ಇದು. ಶ್ರೀ ಮಾಣಿಕ್‌ರಾವ್ ಪಾಟೀಲರಿಗೆ ಆ ಒಂದು ಸ್ಥೈರ್ಯ–ಧೈರ್ಯ, ಶಕ್ತಿ ಸಾಮರ್ಥ್ಯ.....

MR. SPEAKER.—Now, it is a 10.25 A.M. We have to close this demand today itself. For fifteen minutes you can speak.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಸ್ವಾಮಿ ನಾನು ಈ ಇಲಾಖೆಯ ಬೇಡಿಕೆಯ ಮೇಲೆ ಮಾತನಾಡಬೇಕೆಂದು ಇರಲಿಲ್ಲ. ಮಾನ್ಯ ಮುಖ್ಯ ಸಚೇತರರು ನನಗೆ ಮಾತನಾಡಿ ಎಂದು ಹೇಳಿದರು. ಅದಕ್ಕೋಸ್ಕರ ಮಾತನಾಡುತ್ತಿದ್ದೇನೆ.